ಲಂಚಕೋರತನವೇ ಉಗ್ರಗಾಮಿಗಳು ಗಡಿರೇಖೆಯನ್ನು ದಾಟಿ ಒಳನುಸುಳುವಂತೆ ಮಾಡುತ್ತದೆ, ಸ್ಫೋಟಕ ಸಾಮಗ್ರಿಗಳು ಸಮುದ್ರ ದಡದಲ್ಲಿ ಬಂದಿಳಿಯುವಂತೆ ಮಾಡುತ್ತದೆ, ಸರ್ಕಾರಿ ಯಂತ್ರ ಮುರಿದುಬೀಳುವಂತೆ ಮಾಡುವುದಲ್ಲದೆ ದೇಶರಕ್ಷಣೆಯನ್ನೂ ದುರ್ಬಲಗೊಳಿಸುತ್ತದೆ. ಇದನ್ನು ನಮ್ಮ ರಾಜಕಾರಣಿಗಳು ಮನವರಿಕೆ ಮಾಡಿಕೊಳ್ಳಬೇಕು.

ಸಮ್ಮಿಶ್ರ ಸರ್ಕಾರಗಳ ಈ ಕಾಲದಲ್ಲಿ ರಾಜಕೀಯ ಪಕ್ಷಗಳು ಸರಕಾರಿ ಇಲಾಖೆಗಳನ್ನು, ಪಕ್ಷದ ನಿಧಿಗಾಗಿ ಹಣ ಗಳಿಸಿಕೊಡುವ ಸಾಧನಗಳೆಂದೇ ತಿಳಿಯುತ್ತಿವೆ. ೨೦೦೬ರ ಸ್ವಿಸ್ ಬ್ಯಾಂಕಿಂಗ್ ಒಕ್ಕೂಟದ ವರದಿಯೊಂದು ಆ ದೇಶದಲ್ಲಿ ಭಾರತ ಠೇವಣಿಯಿಟ್ಟಿರುವ ಹಣ ೧,೪೫೬ ಬಿಲಿಯನ್ ಡಾಲರ್‌ಗಳೆಂದೂ, ಇದು ಇತರೆಲ್ಲಾ ದೇಶಗಳ ಒಟ್ಟು ಠೇವಣಿಗಿಂತಲೂ ಎಷ್ಟೋ ಹೆಚ್ಚು ಪ್ರಮಾಣದ್ದೆಂದೂ ಹೇಳುತ್ತದೆ. ಆದ್ದರಿಂದ, ದೇಶದ ಹಿತ ರಕ್ಷಣೆಗಾಗಿ ಮಾಡಬೇಕಾಗಿರುವ ಅತಿ ಮುಖ್ಯ ಕಾರ್ಯವೆಂದರೆ ಈ ಕಪ್ಪುಹಣವನ್ನು ನಿಯಂತ್ರಿಸುವುದು. ವ್ಯವಸ್ಥೆಯನ್ನು ಸ್ವಪ್ರಯೋಜನಕ್ಕಾಗಿ ಬಳಸಿಕೊಳ್ಳುವ ರಾಜಕಾರಣಿಗಳು ಇದಕ್ಕೆ ಮನಸ್ಸು ಮಾಡುವುದು ಅಸಂಭವ. ಜನಮನವೇ ಇದಕ್ಕೆ ಅಣಿಯಾಗಬೇಕು; ನ್ಯಾಯಾಂಗ, ಕೇಂದ್ರೀಯ ವಿಚಕ್ಷಣಾ ಆಯೋಗ, ಸರ್ಕಾರೇತರ ಸಂಸ್ಥೆಗಳು ಇದರ ಮುಂದಾಳತ್ವವನ್ನು ವಹಿಸಬೇಕು.

ಭ್ರಷ್ಟಾಚಾರವು ದೇಶದ ಆರ್ಥಿಕಾಭಿವೃದ್ಧಿಗೆ ಮಾರಕವಾಗಿದೆ. ಭ್ರಷ್ಟಾಚಾರದಲ್ಲಿ ಶೇಕಡ ೧೫ರಷ್ಟು ಕಡಮೆಯಾದರೂ ಬಂಡವಾಳ ಹೂಡಿಕೆ ಶೇಕಡ ೩೦ರಷ್ಟು ಹೆಚ್ಚಾಗುತ್ತದೆ, ಆ ಮೂಲಕ ಆರ್ಥಿಕಾಭಿವೃದ್ಧಿಯ ದರ ಶೇಕಡ ೧.೯ರಷ್ಟು ಏರುತ್ತದೆ ಎಂದು ೨೦೦೧ ರಲ್ಲಿ ಪಿ.ಎಚ್.ಡಿ. ಛೇಂಬರ್ ಆಫ್ ಕಾಮರ್ಸ್ ನಡೆಸಿದ ಅಧ್ಯಯನವೊಂದು ಹೇಳುತ್ತದೆ. ಬಡಜನರ ಹಾಗೂ ದೇಶದ ಹಿತಕ್ಕೆ ಮಾರಕವಾಗಿರುವ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲೇಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿರುವಂತಹ ಹೆಚ್ಚಿನ ಪಾರದರ್ಶಕತೆಯನ್ನು ಚುನಾವಣಾ ವ್ಯವಸ್ಥೆಯಲ್ಲಿ ಜಾರಿಗೆ ತರುವುದರ ಮೂಲಕ ಇದನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದು. ನ್ಯಾಯಾಂಗ, ಚುನಾವಣಾ ಆಯೋಗ ಮುಂತಾದವು ಇದನ್ನು ಮಾಡಬೇಕೇ ಹೊರತು, ರಾಜಕಾರಣಿಗಳಿಂದ ಈ ಕೆಲಸ ಸರ್ವಥಾ ಸಾಧ್ಯವಾಗಲಾರದು. ಸರ್ಕಾರೇತರ ಸಂಸ್ಥೆಗಳು, ವಿದ್ಯಾವಂತ ನಾಗರಿಕರು ಸಾಮಾನ್ಯ ಜನರನ್ನು ಭ್ರಷ್ಟಾಚಾರದ ವಿರುದ್ಧ ಬಂಡೇಳುವಂತೆ ಹುರಿದುಂಬಿಸಬೇಕು.

ಒಟ್ಟಿನಲ್ಲಿ, ನಮ್ಮ ಯೋಗ್ಯತೆಗೆ ತಕ್ಕಂತಹ ಸರ್ಕಾರವನ್ನು ನಾವು ಪಡೆಯುತ್ತೇವೆ ಎನ್ನುವುದು ಸುಳ್ಳಲ್ಲ. ಭ್ರಷ್ಟಾಚಾರದ ದೂರಗಾಮಿ ಅವಗುಣಗಳ ಬಗ್ಗೆ ಜನಜಾಗೃತಿಯನ್ನು ಉಂಟುಮಾಡಲು ಶ್ರಮಿಸುತ್ತೇವೆ ಎಂದು ನಾವೆಲ್ಲರೂ ಪ್ರತಿಜ್ಞೆ ಮಾಡೋಣ. ಸರಿಯಾದ ವಿಶ್ಲೇಷಣೆ, ನಂಬಿಕೆ ಮತ್ತು ಶ್ರದ್ಧೆಗಳಿಂದ ಮುಂದುವರಿದರೆ ಈ ಕಾರ್ಯವು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

★

**ವಾರ್ತಾ ವಿಶ್ಲೇಷಣೆ**

## ಸಾರ್ಥಕ ಜೀವಿ

ಅವರ ಹೆಸರು ನಾರಾಯಣನ್ ಕೃಷ್ಣನ್. ಅವರಿಗೆ ಪಂಚತಾರಾ ಹೋಟೆಲ್‌ನಲ್ಲಿ ಮುಖ್ಯ ಅಡುಗೆಯವನ ಕೆಲಸ. ಪ್ರತಿಭಾಶಾಲಿ ಯುವಕರಾದ ಅವರು ಪಾಕಶಾಸ್ತ್ರದಲ್ಲಿ ಬಹುಮಾನವನ್ನೂ ಪಡೆದಿದ್ದರು. ಸ್ವಿಟ್ಜರ್‌ಲ್ಯಾಂಡಿನಲ್ಲಿ ಒಳ್ಳೆಯ ಕಡೆ ಕೆಲಸಕ್ಕೂ ಅವರು ಆಯ್ಕೆಯಾಗಿದ್ದರು. ಅಲ್ಲಿಗೆ ಹೋಗುವ ಮೊದಲು ತಮ್ಮ ಸ್ವಂತ ಊರಿಗೆ ಹೋದರು. ಅದು ಅವರ ಜೀವನದ ಗತಿಯನ್ನೇ ಬದಲಾಯಿಸಿತು.

"ಒಬ್ಬ ಮುದುಕ ಸೇತುವೆಯ ಕೆಳಗೆ ಕುಳಿತುಕೊಂಡಿದ್ದ; ಆಹಾರಕ್ಕಾಗಿ, ತಾನು ಮಾಡಿಕೊಂಡಿದ್ದ ಹೊಲಸನ್ನೇ ತಿನ್ನುತ್ತಿದ್ದ. ಇದು ನನ್ನ ಮನಸ್ಸಿನ ಮೇಲೆ ಆಳವಾದ ಗಾಸಿಯನ್ನುಂಟುಮಾಡಿತು. ಅಕ್ಷರಶಃ ನಾನು ಒಂದು ಸೆಕೆಂಡ್ ಕಾಲ ನಡುಗಿಹೋದೆ. ನಂತರ ಆ ಮುದುಕನಿಗೆ ಆಹಾರ ತಂದುಕೊಟ್ಟೆ ಹಾಗೂ ಇನ್ನುಳಿದ ನನ್ನ ಜೀವಮಾನವೆಲ್ಲ ಇದನ್ನೇ ಮಾಡುವೆನೆಂದು ಶಪಥ ತೊಟ್ಟೆ" ಎನ್ನುತ್ತಾರೆ ನಾರಾಯಣನ್.

ನಾರಾಯಣನ್ ಹಿಂತಿರುಗಿ ಬಂದಿದ್ದು ತಮ್ಮ ಸ್ವಂತ ಊರಾದ ತಮಿಳುನಾಡಿನ ಮಧುರೆಗೆ; ೨೦೦೨ನೇ ಇಸವಿಯಲ್ಲಿ. ತಾವು ನೋಡಿದ ಈ ದಯನೀಯ ದೃಶ್ಯ ಅವರನ್ನು ಕಾಡತೊಡಗಿತು. ಒಂದು ವಾರದೊಳಗೆ ಅವರು ತಮ್ಮ ಕೆಲಸವನ್ನು ಬಿಟ್ಟುಬಿಟ್ಟರು. ಎಂದೆಂದಿಗೂ ತಮ್ಮ ಸ್ವಂತ ಊರಿಗೆ ಮರಳಿ ಬಂದರು. ಅಷ್ಟರಲ್ಲಿ ತಮ್ಮ ಭವಿಷ್ಯದ ಜೀವನಕ್ರಮವನ್ನು ನಿರ್ಧರಿಸಿಕೊಂಡಿದ್ದರು. "ಮನಸ್ಸಿನಲ್ಲಿ ಅಂದು ಹೊತ್ತಿಕೊಂಡ ಸ್ಫೂರ್ತಿಯ ಆ ಕಿಡಿಯೇ, ಜ್ವಾಲೆಯಾಗಿ ನನ್ನಂತರಂಗದಲ್ಲಿ ಉರಿಯುತ್ತಿದೆ; ಬುದ್ಧಿಮಾಂದ್ಯ ಅನಾಥರು ಮತ್ತು ತಮ್ಮನ್ನು ತಾವು ನೋಡಿಕೊಳ್ಳಲಾಗದವರ ಸೇವೆಯನ್ನು ಮಾಡಲು ಪ್ರೇರಕಶಕ್ತಿಯಾಗಿದೆ" ಎನ್ನುತ್ತಾರೆ ನಾರಾಯಣನ್.

೨೦೦೩ರಲ್ಲಿ ನಾರಾಯಣನ್ 'ಅಕ್ಷಯ ಟ್ರಸ್ಟ್' ಎಂಬ ಸೇವಾಸಂಸ್ಥೆಯನ್ನು ಈ ಕಾರ್ಯಕ್ಕಾಗಿಯೇ ಹುಟ್ಟುಹಾಕಿದರು. ಈಗ ೨೯ ವರ್ಷ ವಯಸ್ಸಾಗಿರುವ ನಾರಾಯಣನ್, ಇದುವರೆಗೆ, ತಿಂಡಿ, ಮಧ್ಯಾಹ್ನದ ಊಟ, ರಾತ್ರಿಯ ಊಟ – ಎಲ್ಲ ಸೇರಿ ೧೨ ಲಕ್ಷ ಊಟಗಳನ್ನು ನಿರ್ಗತಿಕರಿಗೆ ಮತ್ತು ಅನಾಥರಿಗೆ ನೀಡಿದ್ದಾರೆ. ಅವರಲ್ಲಿ ಬಹುತೇಕರು, ತಮ್ಮ ಮನೆಗಳಿಂದ ಹೊರನೂಕಲ್ಪಟ್ಟವರು ಅಥವಾ ತಮ್ಮ ಕುಟುಂಬದವರಿಂದಲೇ ಹಿಂಸೆಗೆ ಒಳಗಾದವರು.

"ಯಾರು ಇತರರಿಗಾಗಿ ಜೀವಿಸುತ್ತಾರೋ ಅವರು ಮಾತ್ರ ಜೀವಿಸುತ್ತಾರೆ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ನಾರಾಯಣನ್ ಕೃಷ್ಣನ್ ಅಂತಹ ಒಬ್ಬ ಸಾರ್ಥಕ ಜೀವಿ.

★

# ಪರಿಪೂರ್ಣ ಭಕ್ತರಾಗಿ ಸ್ವಾಮಿ ವಿವೇಕಾನಂದರು

ಸ್ವಾಮಿ ಭಜನಾನಂದ

*(ಹಿಂದಿನ ಸಂಚಿಕೆಯಿಂದ)*

(**ಹಿಂದಿನ ಸಂಚಿಕೆಯಲ್ಲಿ:** ಅನುಷ್ಠಾನವೇದಾಂತವು ಮೂರು ಮೂಲಭೂತ ನಿಯಮಗಳ ಮೇಲೆ ಆಧಾರಿತವಾಗಿದೆ. ಇದರಲ್ಲಿ ಮೊದಲನೆಯ ನಿಯಮವೆಂದರೆ, ದಿವ್ಯತೆಯ ಅಂಶವನ್ನು ಮೊದಲು ತನ್ನಲ್ಲಿ ಮೂಡಿಸಿಕೊಂಡರೆ ಮಾತ್ರವೇ ಒಬ್ಬ ವ್ಯಕ್ತಿಯು ಭಗವಂತನ ನೈಜ ಆರಾಧನೆಯನ್ನು ಮಾಡಬಹುದು ಎಂಬುದು.)

**ಎ**ರಡನೆಯ ನಿಯಮವು ಛಾಂದೋಗ್ಯ ಉಪನಿಷತ್ತಿನ ಪ್ರಸಿದ್ಧವಾದ ವಾಕ್ಯದಲ್ಲಿ ಸಂಗ್ರಹಿತವಾಗಿದೆ: **ಯಥಾ ಕ್ರತುಃ ಅಸ್ಮಿನ್ ಲೋಕೇ ಪುರುಷೋ ಭವತಿ** ( 'ಈ ಲೋಕದಲ್ಲಿ ತನ್ನ ಶ್ರದ್ಧೆಯಂತೆ ಒಬ್ಬನು ಆಗುವನು'). ಒಬ್ಬ ವ್ಯಕ್ತಿಯು ಒಂದು ಆದರ್ಶವನ್ನು ಉತ್ಕಟವಾದ ಶ್ರದ್ಧೆ ಮತ್ತು ಏಕಾಗ್ರತೆಗಳೊಡನೆ ಚಿಂತಿಸಿದರೆ, ಅದರ ಪ್ರಮುಖವಾದ ಗುಣ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುವನು. ಸಾಮಾನ್ಯವಾಗಿ ಇದನ್ನು ಒಂದು ಪ್ರಸಿದ್ಧವಾದ ಉದಾಹರಣೆಯ ಮೂಲಕ ವಿವರಿಸುತ್ತಾರೆ. ಒಂದು ಕೀಟವು ಭ್ರಮರವನ್ನು ಕುರಿತು ಚಿಂತಿಸುತ್ತ, ಭ್ರಮರವೇ ಆಗಿಬಿಡುತ್ತದೆ (ಭ್ರಮರ–ಕೀಟ ನ್ಯಾಯ). ಒಂದು ದೇವತೆಯನ್ನು ಧ್ಯಾನ ಮಾಡುತ್ತ, ಸಾಧಕನ ಪ್ರಜ್ಞೆಯು ಪರಿಶುದ್ಧವಾಗುವುದು; ಹಾಗೆಯೇ ಆ ದೇವತೆಯ ಪ್ರಜ್ಞೆಯ ರೂಪದಲ್ಲಿ ಪರಿವರ್ತನೆ ಹೊಂದುವುದು. ಉಪನಿಷತ್ತುಗಳಲ್ಲಿ ಕಂಡುಬರುವ 'ವಿದ್ಯಾ' ಅಥವಾ 'ಉಪಾಸನೆ' ಗಳ (ಅಂಥ ೩೨ ಉಪಾಸನೆಗಳನ್ನು ಉಪನಿಷತ್ತುಗಳಲ್ಲಿ ಗುರುತಿಸಲಾಗಿದೆ) ತಿರುಳು ಕೂಡ ಈ ನಿಯಮವೇ ಆಗಿದೆ ಎಂದು ಗುರುತು ಮಾಡಿ ತೋರಿಸಬಹುದಾಗಿದೆ. "ಮನಸ್ಸು ಒಂದು ಬಿಳಿಯ ಬಟ್ಟೆಯ ಹಾಗೆ. ಅದಕ್ಕೆ ಯಾವ ಬಣ್ಣವನ್ನು ಹಾಕಿದರೂ, ಆ ಬಣ್ಣವನ್ನು ಪಡೆಯುತ್ತದೆ" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

ಈ ಮಹತ್ವದ ನಿಯಮದ ಭದ್ರ ಬುನಾದಿಯ ಮೇಲೆಯೇ, ಶತಶತಮಾನಗಳ ಕಾಲದಿಂದ, ಹಿಂದೂಗಳು ಜೀವನ ಮತ್ತು ಸತ್ಯತತ್ತ್ವದ ಬಗ್ಗೆ ತಮ್ಮ ಧೋರಣೆಗಳನ್ನು ರೂಪಿಸಿಕೊಂಡಿದ್ದಾರೆ; ಸ್ವಾಮಿ ವಿವೇಕಾನಂದರು ತಮ್ಮ ಶ್ರದ್ಧೆ ಮತ್ತು ಶಕ್ತಿಗಳ ತತ್ತ್ವವನ್ನು ಇಟ್ಟುಕೊಂಡಿದ್ದಾರೆ. ತಾವು ಚೆನ್ನೈ ನಗರದಲ್ಲಿ ನೀಡಿದ ಭಾಷಣವೊಂದರಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: " ನೀವು ಕೊಳಕಿನಿಂದ ಕೊಳಕನ್ನು ಸ್ವಚ್ಛಮಾಡಲಾದೀತೇ? ಪಾಪವು ಪಾಪವನ್ನಾಗಲಿ, ದುರ್ಬಲತೆಯು ದುರ್ಬಲತೆಯನ್ನಾಗಲಿ ಪರಿಹರಿಸುವುದೇ? ಓ ಮನುಷ್ಯನೇ, ಶಕ್ತಿ, ಶಕ್ತಿ. ಇದನ್ನೇ ಉಪನಿಷತ್ತುಗಳು ಹೇಳುವುದು. ಎದ್ದು ನಿಲ್ಲು. ಶಕ್ತನಾಗು."

ಸ್ವಾಮಿ ವಿವೇಕಾನಂದರ ಉಪನ್ಯಾಸಗಳಲ್ಲಿ ಮತ್ತು ಪತ್ರಗಳಲ್ಲಿ ಮತ್ತೆ ಮತ್ತೆ ಬರುವ ವಿಷಯವೇ ಇದು. ಅವರು ಪ್ರಾಚೀನ ರಾಜ್ಞಿಯಾದ ಮದಾಲಸಾ ಎಂಬಾಕೆಯ ಕಥೆಯನ್ನು ಬಹಳ ಇಷ್ಟಪಡುತ್ತಿದ್ದರು. "ನೀನು ಪರಿಶುದ್ಧನಾದವನು" ಎಂದೇ ಅವಳು ತನ್ನ ಮಕ್ಕಳಿಗೆ ಬಾಲ್ಯದಿಂದ ಬೋಧಿಸುತ್ತಿದ್ದಳಂತೆ. ಒಬ್ಬ ವ್ಯಕ್ತಿಯಲ್ಲಿ ಹುದುಗಿರುವ ಶಕ್ತಿಗಳನ್ನು ಅನಾವರಣಗೊಳಿಸುವಲ್ಲಿ ಆತನ ಚಿಂತನಾವಿಧಾನದ ಅಪರಿಮಿತ ಪ್ರಭಾವವನ್ನು ಕುರಿತು ಅವರು ಅರಿತಿದ್ದರು. ಅದಕ್ಕೆಂದೇ ಅವರು ಹೀಗೆ ಹೇಳುತ್ತಿದ್ದರು: "ಜಡವಸ್ತುವು ಶಕ್ತಿಶಾಲಿಯಾದುದು ಎಂದು ಪರಿಗಣಿಸುವುದಾದರೆ, ಆಲೋಚನೆಯು ಸರ್ವಶಕ್ತವಾದುದು."

> "ಆತ್ಮವಿಶ್ವಾಸವು ಎಲ್ಲವನ್ನೂ ಸಾಧಿಸಬಲ್ಲುದು. ನನ್ನ ಜೀವನದಲ್ಲಿಯೇ ನಾನು ಇದನ್ನು ಅನುಭವಿಸುತ್ತಿರುವೆನು. ನಾನು ಯಾವಾಗಲೂ ಅದನ್ನು ಅನುಭವಿಸುತ್ತಿರುವೆನು. ನನಗೆ ವಯಸ್ಸಾದಂತೆಲ್ಲ ಆ ವಿಶ್ವಾಸ ಇನ್ನೂ ದೃಢವಾಗುತ್ತ ಬರುತ್ತಿದೆ. ಯಾರಿಗೆ ಆತ್ಮವಿಶ್ವಾಸವಿಲ್ಲವೋ ಅವನು ನಾಸ್ತಿಕ. ಹಳೆಯ ಧರ್ಮಗಳು ಯಾರಿಗೆ ದೇವರಲ್ಲಿ ಭಕ್ತಿ ಇಲ್ಲವೋ ಅವರನ್ನು ನಾಸ್ತಿಕನೆನ್ನುತ್ತಿದ್ದವು. ನವೀನ ಧರ್ಮವು ಯಾರು ಆತ್ಮವಿಶ್ವಾಸಹೀನರೋ ಅವರನ್ನು ನಾಸ್ತಿಕರೆಂದು ಸಾರುತ್ತದೆ."
>
> –ಸ್ವಾಮಿ ವಿವೇಕಾನಂದ

ನೈಜ ಶಕ್ತಿ ಇರುವುದು ಮನಸ್ಸು ಮತ್ತು ಇಚ್ಛಾ ಶಕ್ತಿಗಳಲ್ಲಿ. ಅವು ಪರೀಕ್ಷೆಗಳಿಗೆ ಒಳಪಡುವುದು ಜೀವನದ ಸಮಸ್ಯೆಗಳನ್ನು ನಾವು ಎದುರಿಸುವಾಗ. ಒಬ್ಬ ವ್ಯಕ್ತಿಯು ಇತರರ ಜೊತೆಗೆ ತೋರುವ ಮನೋಭಾವ ಮತ್ತು ನೈಜತೆಯೆಡೆಗೆ ಆತನು ಸಾಮಾನ್ಯವಾಗಿ ತೋರುವ ಮನೋಭಾವ ಕೂಡ, ಅವನು ತನ್ನ ಬಗ್ಗೆಯೇ ಇಟ್ಟುಕೊಂಡಿರುವ ಮನೋಭಾವವನ್ನೇ ಆಧರಿಸಿರುತ್ತವೆ. ಅದಕ್ಕೆಂದೇ ಒಬ್ಬ ವ್ಯಕ್ತಿಯು ಹೊಂದಿರಬೇಕಾದ ಶ್ರದ್ಧೆಯ ಮಹತ್ವದ ಬಗ್ಗೆ ಸ್ವಾಮಿ ವಿವೇಕಾನಂದರು ಬಹಳವಾಗಿ ಒತ್ತುಕೊಟ್ಟಿದ್ದಾರೆ.

ಭಕ್ತಿಭಾವವುಳ್ಳ ಹಾಗೂ ತಮ್ಮ ಶಕ್ತಿಗೆ ಭಗವಂತನೇ ಏಕಮೇವ ಆಕರನೆಂದು ಪರಿಗಣಿಸುವ ಕೆಲವರು ಸ್ವಾಮೀಜಿಯವರ ಈ ಕ್ರಾಂತಿಕಾರಿ ವಾಕ್ಯಗಳನ್ನು ಆಲಿಸಿದಾಗ ಸಂದೇಹಕ್ಕೆ ಒಳಗಾಗುವುದುಂಟು. ಅವರ ಈ ಸಂದೇಹಕ್ಕೆ ಭಾಗಶಃ ಕಾರಣ, ಮೇಲೆ ಹೇಳಿದ ***'ಯಥಾಕ್ರತು'*** ತತ್ತ್ವವನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇರುವುದು. ಇನ್ನೊಂದು ಕಾರಣವೆಂದರೆ ಸ್ವಾಮೀಜಿಯವರ ಮಾತುಗಳನ್ನು ಸಂದರ್ಭವನ್ನು ಗಮನಿಸದೆ ಉಲ್ಲೇಖಿಸಿರುವುದು. ಸ್ವಾಮೀಜಿ ತಮ್ಮ ಒಂದು ಪ್ರವಚನದಲ್ಲಿ ಹೀಗೆ ಹೇಳುತ್ತಾರೆ:

"ಆದರೆ ಇದು ಸ್ವಾರ್ಥಪರತೆಯ ಶ್ರದ್ಧೆಯಲ್ಲ. ಏಕೆಂದರೆ ವೇದಾಂತ ಏಕತೆಯ ಸಿದ್ಧಾಂತ. ಅಂದರೆ ಇದರ ಪ್ರಕಾರ ಎಲ್ಲರಲ್ಲೂ ವಿಶ್ವಾಸವಿಡಬೇಕೆಂದು ಆಗುತ್ತದೆ. ಏಕೆಂದರೆ ನೀನೇ ಸರ್ವವೂ ಆಗಿರುವೆ. ಆತ್ಮಪ್ರೀತಿ ಎಂದರೆ ಎಲ್ಲರ ಮೇಲಿನ ಪ್ರೀತಿ; ಎಲ್ಲ ಪ್ರಾಣಿಗಳ ಮೇಲೂ ಪ್ರೀತಿ; ಎಲ್ಲದರ ವಿಷಯದಲ್ಲೂ ಪ್ರೀತಿ" (*ಕೃತಿಶ್ರೇಣಿ, ೨:೨೪೯*).

ಆದರೆ, ಈ ಸುಂದರ ವಾಕ್ಯಗಳು ಅದೆಷ್ಟು ವಿರಳವಾಗಿ ಉಲ್ಲೇಖವಾಗುತ್ತವೆ! ತಮ್ಮ ಶ್ರದ್ಧೆ ಮತ್ತು ಶಕ್ತಿಯ ತತ್ತ್ವವನ್ನು ಸ್ವಂತ ವೈಭವಕ್ಕಾಗಿ ದುರುಪಯೋಗ ಮಾಡಿಕೊಳ್ಳುವುದನ್ನು ಸ್ವಾಮೀಜಿ ಎಂದಿಗೂ ಬಯಸುತ್ತಿರಲಿಲ್ಲ. ಆದರೆ, ಕೆಲವು ಶ್ರದ್ಧಾಳು ಭಕ್ತರು ಭಗವಂತನನ್ನು ಪ್ರೀತಿಸುವುದಕ್ಕೋಸ್ಕರ ತಮ್ಮನ್ನು ಅತಿ ನೀಚವೃತ್ತಿಯವರು ಎಂದುಕೊಳ್ಳುವುದನ್ನು ಉತ್ತೇಜಿಸಬಾರದು ಎನ್ನುವುದೇ ಅವರ ಇಚ್ಛೆಯಾಗಿತ್ತು. ಕೆಲವರು ತಾವು ಯಾವ ಕೆಲಸಕ್ಕೂ ಬಾರದವರು ಎಂದುಕೊಳ್ಳುವುದೇ ತಮ್ಮ ಭಕ್ತಿಯ ಸಂಕೇತವೆಂಬ ಹಾಗೂ ಅದು 'ಪರಮಾತ್ಮನ ಮಹಾನ್ ವೈಭವ'ವನ್ನು ಪ್ರಶಂಸಿಸುವ ಬಗೆಯೆಂಬ ಭಾವನೆಯನ್ನು ಬೆಳೆಸಿ ಕೊಳ್ಳುತ್ತಾರೆ. ಈ ತಪ್ಪು ಅಭಿಪ್ರಾಯವನ್ನು ತಮ್ಮದೇ ಆದ ಶೈಲಿಯಲ್ಲಿ ಖಂಡಿಸಲು ಸ್ವಾಮೀಜಿ ಬಯಸಿದರು. ಹಾಗೂ ಈ ಕಾರ್ಯದಲ್ಲಿ ಅವರಿಗೆ ಹಿಂದೂಧರ್ಮದ ಧಾರ್ಮಿಕ ಸಂಪ್ರದಾಯಗಳ ಬೆಂಬಲ ಕೂಡ ಸಿಕ್ಕಿತು. ಈ ತಮ್ಮ ಕಾರ್ಯದ ಮೂಲಕ, ದಕ್ಷಿಣ ಭಾರತದ ಆಚಾರ್ಯರು ಶತಮಾನಗಳ ಹಿಂದೆ ಬೋಧಿಸಿದ ಶಕ್ತಿದಾಯಕ ಮತ್ತು ವೀರ್ಯವತ್ತಾದ ಭಕ್ತಿವಿಧಾನವನ್ನು ಪ್ರಚುರಪಡಿಸಲೆಂದೇ ಸ್ವಾಮೀಜಿ ಪ್ರಯತ್ನಿಸಿದರು.

**ಮೂರನೆಯ ನಿಯಮವೆಂದರೆ ಎಲ್ಲ ಕೆಲಸಗಳೂ ಆರಾಧನೆಯೇ ಎನ್ನುವುದು.** ಇಲ್ಲಿ ಕೆಲಸ ಎಂದರೆ ಕರ್ಮ ಎಂದರ್ಥ. ಆದರೆ ಅವೆರಡೂ ಸಮಾನಾರ್ಥಗಳೇನಲ್ಲ. ಎಲ್ಲ ಕೆಲಸಗಳೂ ಕರ್ಮವಾಗಲಾರವು. ಒಂದು ಯಂತ್ರ ಕೆಲಸ ಮಾಡುತ್ತದೆ. ಆದರೆ ಅದು ಕರ್ಮವಲ್ಲ. ಒಬ್ಬ ಮಾನವನು ಒಂದು ನಿರ್ದಿಷ್ಟ ಉದ್ದೇಶವನ್ನು ತಲುಪಲು ಮಾಡುವ ಪ್ರಯತ್ನಕ್ಕೇ ನಾವು **ಕರ್ಮ** ಎಂಬ ಪದವನ್ನು ಅದರ ನೈಜಾರ್ಥದಲ್ಲಿ ಬಳಸಬಹುದು. ಅದರ ಮೂಲವಿರುವುದು ಅಂತರಂಗದ ಸಂವೇದನೆಯಲ್ಲಿ. ಪಿಂಡಾಂಡವು ಬ್ರಹ್ಮಾಂಡದ ಒಂದು ಭಾಗವಾಗಿರುವುದರಿಂದ, ಎಲ್ಲ ವ್ಯಕ್ತಿಗತ ಸಂವೇದನಗಳೂ ಭಾಗಗಳಾಗಿರುವ ಒಂದು ಸಾಮಾನ್ಯ ಆದ್ಯ ಜೀವಸಂವೇದನೆಯು ಇದ್ದಿರಲೇಬೇಕು. ಈ ಭಾವನೆಯನ್ನೇ ಭಗವದ್ಗೀತೆಯ **ಯತಃ ಪ್ರವೃತ್ತಿಃ ಭೂತಾನಾಂ** – ಜೀವಿಗಳ ಎಲ್ಲ ಕಾರ್ಯಚಟುವಟಿಕೆಗಳೂ ಯಾವುದರಿಂದ ಮೂಡಿಬಂದಿವೆಯೋ ಅದು ಎಂಬ ಉಕ್ತಿಯಲ್ಲಿ ಕಾಣಬಹುದಾಗಿದೆ. ಇದನ್ನು ಅರಿಸ್ಟಾಟಲನ 'ಅಚಲನಾದ ಚಾಲಕ' ಎಂಬ ದೇವರ ಬಗೆಗಿನ ವ್ಯಾಖ್ಯಾನದಲ್ಲಿ ಕೂಡ ನೋಡಬಹುದು. ಥಾಮಸ್ ಅಕ್ವಿನಾಸನು ಸ್ವಲ್ಪ ಪರಿವರ್ತನೆಗೊಳಿಸಿದ ಈ ಪರಿಕಲ್ಪನೆಯೇ ಕ್ಯಾಥೊಲಿಕ್ ದೈವಶಾಸ್ತ್ರದ ಆಧಾರಸ್ತಂಭವಾಗಿದೆ. ಈ ಆದ್ಯ ದಿವ್ಯಸಂವೇದನೆಯು ಎಲ್ಲ ಜೀವಿಗಳನ್ನೂ ಬಗೆಬಗೆಯ ಕಾರ್ಯಗಳಲ್ಲಿ ತೊಡಗುವಂತೆ ಮಾಡುತ್ತಿದೆ. ಅವರೆಲ್ಲರೂ ತಾನಾಗಿಯೇ ತಿರುಗುತ್ತಿರುವ ಯಂತ್ರದ ಮೇಲೆ ಅಳವಡಿಸಿರುವ ಬೊಂಬೆಗಳಂತೆ ಆಗಿದ್ದಾರೆ. ಈ ಆದ್ಯ ಸಂವೇದನೆಯೇ ಸಹಜ ಸಂವೇದನೆಯ ರೂಪದಲ್ಲಿ ಎಲ್ಲ ಜೀವಿಗಳ ಸರ್ವ ಕಾರ್ಯಗಳಲ್ಲಿಯೂ, ಅಭಿವ್ಯಕ್ತಿಗಳಲ್ಲಿಯೂ ಸ್ಫುರಣಗೊಂಡಿದೆ. ಮಾನವನು ಮಾತ್ರವೇ ಈ ಪ್ರಭಾವಶಾಲಿ ಯಾಂತ್ರಿಕ ಕ್ರಿಯೆಯಿಂದ ಪಾರಾಗಬಲ್ಲ. ಕರ್ಮಯೋಗವು, ಈ ಆಂತರಿಕ ಸಾಮರ್ಥ್ಯವನ್ನು ಹೇಗೆ ಕ್ರಿಯಾರೂಪಕ್ಕೆ ತರುವುದು ಎಂದು ಬೋಧಿಸುತ್ತದೆ. ಇದನ್ನು ಎರಡು ರೀತಿಗಳಲ್ಲಿ ಮಾಡಬಹುದಾಗಿದೆ: ೧. ನಿರಂತರ ನಿರಾಸಕ್ತ ಭಾವನೆಯ ಮೂಲಕ ಕರ್ಮಬಂಧನದಿಂದ ಬಿಡುಗಡೆ ಹೊಂದುವುದು; ೨. ಈ ಆದ್ಯ ಸಂವೇದನೆಯು ಉಂಟು ಮಾಡಿರುವ ಪ್ರೇರಣಾತ್ಮಕ ಶಕ್ತಿಯನ್ನು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವ ಸಾಧನವನ್ನಾಗಿ ಪರಿವರ್ತಿಸಿಕೊಳ್ಳುವುದು. ಮೊದಲನೆಯದು **ಜ್ಞಾನಮಾರ್ಗ** ಮತ್ತು ಎರಡನೆಯದು **ಭಕ್ತಿಮಾರ್ಗ**. ಸ್ವಾಮಿ ವಿವೇಕಾನಂದರು ಎರಡು ಮಾರ್ಗಗಳನ್ನೂ ಬೋಧಿಸಿದ್ದಾರೆ. ಆದರೆ ಇಲ್ಲಿ ನಾವು ನಿಜವಾಗಿಯೂ ಭಕ್ತಿಯೋಗದ ಒಂದು ಭಾಗವಾದ, ಎರಡನೆಯ ಮಾರ್ಗದ ಬಗ್ಗೆ ಮಾತ್ರವೇ ಗಮನಹರಿಸಿದ್ದೇವೆ.

ಹಿಂದೆ ಉಲ್ಲೇಖಿಸಿದ ಭಗವದ್ಗೀತೆಯ ಶ್ಲೋಕವು ಹೀಗೆ ಹೇಳುತ್ತದೆ: "ಯಾರಿಂದ ಎಲ್ಲ ಬಗೆಯ ಕ್ರಿಯೆಗಳೂ ಮೂಡಿ ಬಂದಿದೆಯೋ, ಯಾವನಿಂದ ಎಲ್ಲವೂ ವ್ಯಾಪಿಸಲ್ಪಟ್ಟಿದೆಯೋ, ಅಂಥವನನ್ನು ತನ್ನ ಕ್ರಿಯೆಗಳ ಮೂಲಕ ಆರಾಧಿಸುವ ಮನುಷ್ಯನು ಪರಿಪೂರ್ಣತೆಯನ್ನು ಹೊಂದುತ್ತಾನೆ" (*ಭಗವದ್ಗೀತೆ, ೧೮:೪೬*). ಭಗವಾನ್ ಶ್ರೀಕೃಷ್ಣನು ಇಲ್ಲಿ ಬಹು ಮುಖ್ಯವಾದ ಆಧ್ಯಾತ್ಮಿಕ ನಿಯಮವನ್ನು ಜಾರಿಗೆ ತರುತ್ತಿದ್ದಾನೆ. ಸ್ವಾಮಿ ವಿವೇಕಾನಂದರು ಮಾಡಿದ ಸಾಧನೆಯೆಂದರೆ, ಇದನ್ನು ವ್ಯಕ್ತಿಗತ ಆಧ್ಯಾತ್ಮಿಕ ಜೀವನದ ಸೀಮಿತ ಸ್ತರಕ್ಕೆ ಮಾತ್ರ ಅಳವಡಿಸಿದ್ದು ಮಾತ್ರವಲ್ಲ, ಅದಕ್ಕೂ ಮಿಗಿಲಾಗಿ ಮಾನವೀಯ ಕಾರ್ಯಚಟುವಟಿಕೆಗಳ ಎಲ್ಲ ಮುಖಗಳಿಗೂ ಅದನ್ನು ವಿಸ್ತರಿಸಿದ್ದು. ಎಲ್ಲ ಜೀವಿಗಳೂ ಪರಮಾತ್ಮನ ಅಭಿವ್ಯಕ್ತಿಗಳೆಂದೂ, ಹಾಗೆಯೇ ಎಲ್ಲ ಕಾರ್ಯಗಳೂ ಏಕಮೇವ ಆದ್ಯ ಕ್ರಿಯಾಸಂವೇದನೆಯಿಂದ ಮೂಡಿಬಂದದ್ದೆಂದೂ ಸಾಕ್ಷಾತ್ಕರಿಸಿಕೊಂಡಾಗ ಮಾತ್ರ ಎಲ್ಲ ಬಗೆಯ ಕೆಲಸಗಳೂ ಭಗವಂತನ ಆರಾಧನಾರೂಪಗಳೆಂದು ಅರಿವಿಗೆ ಬರುತ್ತದೆ. ಇದು ಸರಳವೂ ಸ್ಪಷ್ಟವೂ ಆದ ಭಾವನೆಯೆಂದು ಕಂಡುಬಂದರೂ, ಇದು ಬಹಳ ಅಪಾರ್ಥಕ್ಕೆ ಒಳಗಾಗಿರುವ ಹಿಂದೂಧರ್ಮದ ತತ್ತ್ವವಾಗಿದೆ. ಈ ವಿಷಯದ ಬಗೆಗಿನ ವಾಗ್ವಿವಾದಗಳಲ್ಲಿ ಸಿಕ್ಕಿಹಾಕಿಕೊಳ್ಳದೆ, ಸ್ವಾಮಿ ವಿವೇಕಾನಂದರ ಅಮೃತವಾಣಿಯ ಕಡೆಗೆ ನಮ್ಮ ಗಮನವನ್ನು ಹರಿಸೋಣ:

"ಪ್ರತಿಯೊಬ್ಬ ಸ್ತ್ರೀಪುರುಷನನ್ನೂ ದೇವರಂತೆ ನೋಡಿ. ನೀವು ಯಾರಿಗೂ ಸಹಾಯ ಮಾಡಲಾರಿರಿ. ಬೇಕಾದರೆ ನೀವು ಸೇವೆ ಮಾಡಬಹುದು. ನಿಮಗೆ ಆ ಭಾಗ್ಯ ಬಂದರೆ ನೀವು ಭಗವಂತನ ಮಕ್ಕಳನ್ನು ಪೂಜಿಸಬಹುದು; ಆತನನ್ನು ಪೂಜಿಸಬಹುದು. ಭಗವಂತನು ತನ್ನ ಮಕ್ಕಳ ಸೇವೆ ಮಾಡಲು ಅವಕಾಶ ಒದಗಿಸಿಕೊಟ್ಟರೆ ನೀವು ಧನ್ಯರು ಎಂದು ಭಾವಿಸಿ. ನಿಮ್ಮ ಸಮಾನರಿಲ್ಲವೆಂದು ಭಾವಿಸಬೇಡಿ. ಈ ಸದವಕಾಶ ಇತರರಿಗೆ